ವಿದ್ಯುತ್ - ಸಬ್ ಸ್ಟೇಷನ್ಗಳ ಕಾಮಗಾರಿ

343 - ಶ್ರೀ ಎ.ರುಕ್ಮಯ್ಯ ಪೂಜಾರಿ.(ವಿಟ್ಲ) : ಮಾನ್ಯ ಇಂಧನ ರಾಜ್ಯ ಸಚಿವರು : ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) *ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಂಜೂರಾಗಿ ಪೂರ್ತಿ ಕಾಮಗಾರಿ ಕೆಲಸ ಆಗದೇ ಇರುವ ವಿದ್ಯುತ್ ಸಬ್ ಸ್ಟೇಷನ್ಗಳು ಎಷ್ಟು?*

ಆ) *ವಿಟ್ಲ ವಿದ್ಯುತ್ ಸಬ್ ಸ್ಟೇಷನ್ ಎಂದಿನಿಂದ ಕಾರ್ಯಾಚರಣೆಯಲ್ಲಿದೆ. ಸದರಿ ಸಬ್ಸ್ಟೇಷನ್ನಲ್ಲಿ ಭರ್ತಿಯಾಗದೇ ಉಳಿದಿರುವ ಹುದ್ದೆಗಳ ಸಂಖ್ಯೆ ಎಷ್ಟು?*

ಇ) *ಹಾಗಿದ್ದಲ್ಲಿ ಸದರಿ ವಿಷಯಗಳಲ್ಲಿ ಸರ್ಕಾರದವರು ಸೂಕ್ತ ಕ್ರಮ ಕೈಗೊಳ್ಳುವರೇ?*

ಶ್ರೀ ವಿ. ಮುನಿಯಪ್ಪ (ಇಂಧನ ರಾಜ್ಯ ಸಚಿವರು)

ಅ) ವಿದ್ಯುತ್ ಸಬ್ ಸ್ಟೇಷನ್ಗಳ ಸಂ.5

ಆ) ವಿಟ್ಲ ವಿದ್ಯುತ್ ಸಬ್ ಸ್ಟೇಷನ್ 12.6.93ರಿಂದ ಕಾರ್ಯಾಚರಣೆಯಲ್ಲಿದೆ. ಸದರೀ ಸಬ್ ಸ್ಟೇಷನ್ನಲ್ಲಿ ಹಾಲಿ ಖಾಲಿ ಇರುವ ಹುದ್ದೆಗಳ ಸಂಖ್ಯೆ 8.

ಇ) ಮುಂಗಾರು ಮಳೆ ಕಳೆದ ನಂತರ ನಿರ್ಮಾಣ ಕಾರ್ಯವನ್ನು ಚುರುಕುಗೊಳಿಸಿ ಆದಷ್ಟು ಶೀಘ್ರಗತಿಯಲ್ಲಿ ಪೂರ್ಣಗೊಳಿಸಲಾಗುವುದು. ವಿಟ್ಲ ವಿದ್ಯುತ್ ಸಬ್ ಸ್ಟೇಷನ್ನಲ್ಲಿ ಹಾಲಿ ಖಾಲಿ ಇರುವ ಹುದ್ದೆಗಳನ್ನು ಆದಷ್ಟು ಜಾಗ್ರತೆ ಭರ್ತಿ ಮಾಡಲಾಗುವುದು.

ರಟ್ಟೀ ಹಳ್ಳಿ ಬ್ಯಾರೆಜ್ ನಿರ್ಮಾಣ

338 - ಶ್ರೀ ಬಿ.ಹೆಚ್. ಬನ್ನಿಕೋಡ್ (ಹಿರೇಕೆರೂರು): ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) *ಧಾರವಾಡ ಜಿಲ್ಲಾ ಹಿರೇಕೆರೂರು ರಟ್ಟಿಹಳ್ಳಿ ಗ್ರಾಮದ ಹತ್ತಿರ ಕುಮದ್ವತಿ ನದಿಗೆ ಬ್ಯಾರೇಜ್ ನಿರ್ಮಾಣ ಮಾಡಲು ಸರ್ಕಾರ ಹಾಕಿಕೊಂಡಿರುವ ಕಾರ್ಯಕ್ರಮಗಳೇನು?*

ಆ) *ಈ ಕಾಮಗಾರಿಯ ಅಂದಾಜು ಮೊತ್ತವೆಷ್ಟು? 1994-95ರ ಆಯವ್ಯಯದಲ್ಲಿ ಒದಗಿಸಿರುವ ಹಣವೆಷ್ಟು?*

ಇ) *ಈ ಕಾಮಗಾರಿಯನ್ನು ಪ್ರಾರಂಭ ಮಾಡದೇ ಇದ್ದಲ್ಲಿ, ಈಗಾಗಲೇ ಪೂರ್ಣಗೊಂಡಿರುವ ಯಲಿವಾಳ ಏತ ನೀರಾವರಿ ಯೋಜನೆಗೆ ಸಾಕಷ್ಟು ನೀರು ಲಭ್ಯವಿಲ್ಲದೆ ಸದರಿ ಏತ ನೀರಾವರಿ ಯೋಜನೆ ನಿರುಪಯುಕ್ತ ಆಗುವ ಬಗ್ಗೆ ಸರ್ಕಾರ ಗಮನಿಸಿದೆಯೇ; ಹಾಗಿದ್ದಲ್ಲಿ ಸದರಿ ಯೋಜನೆಯ ಬ್ಯಾರೇಜ್ ನಿರ್ಮಾಣಕ್ಕೆ ಆಡಳಿತಾತ್ಮಕ ಹಾಗೂ ತಾಂತ್ರಿಕ ಮಂಜೂರಾತಿಯ ಬಗ್ಗೆ ಸರ್ಕಾರ ಕ್ರಮ ಕೈಗೊಳ್ಳುವುದೇ?*

ಶ್ರೀ ಎಂ.ಪಿ. ಕೇಶವಮೂರ್ತಿ (ಸಣ್ಣ ನೀರಾವರಿ ರಾಜ್ಯ ಸಚಿವರು)

ಅ) ಹಿರೇಕೆರೂರು ತಾಲ್ಲೂಕು ರಟ್ಟಿಹಳ್ಳಿ ಗ್ರಾಮದ ಹತ್ತಿರ ಕುಮದ್ವತಿ ನದಿಗೆ ಅಡ್ಡಲಾಗಿ ಬ್ಯಾರೇಜ್ ನಿರ್ಮಾಣ ಕಾಮಗಾರಿಯ ಅಂದಾಜು ಪಟ್ಟಿ ಸರ್ಕಾರದ ಪರಿಶೀಲನೆಯಲ್ಲಿದೆ

ಆ) ಅಂದಾಜು ಮೊತ್ತ 96.60 ಲಕ್ಷ ರೂ.ಗಳು 94-95ನೇ ಸಾಲಿನ ಆಯವ್ಯಯದಲ್ಲಿ ಈ ಕಾಮಗಾರಿಗೆ 1.00 ಲಕ್ಷ ರೂ.ಅನುದಾನವನ್ನು ಒದಗಿಸಲಾಗಿದೆ.

ಇ) ಗಮನಿಸಿದ, ರಟ್ಟಿಹಳ್ಳಿ ಬ್ಯಾರೇಜ್ ನಿರ್ಮಾಣದಿಂದ ಎಲವಾಳ ಏತ ನೀರಾವರಿ ಯೋಜನೆಗೆ ಈಗ ಕೊಡುತ್ತಿರುವ ಮುಂಗಾರು ಬೆಳಿಗಳಿಗೆ ನೀರು ಪೂರೈಸುವುದರ ಜೊತೆಗೆ ಹಿಂಗಾರು ಬೆಳಿಗೂ ನೀರು ಪೂರೈಸಲು ಸಾಧ್ಯವಾಗುವುದು.